**ಅಭ್ಯಾಸ ಪ್ರಶ್ನೆ ಪತ್ರಿಕೆ -೩ ೧೦ ನೆಯ ತರಗತಿ ಪ್ರಥಮ ಭಾಷೆ ಕನ್ನಡ ಅಂಕಗಳು-೪೦**

**ಸೂಚನೆಗಳು : ಕೊಟ್ಟಿರುವ ಪ್ರಶ್ನೆಗಳು ಬಹು ಆಯ್ಕೆ ಮಾದರಿಯ ಪ್ರಶ್ನೆಗಳಾಗಿವೆ . ಪ್ರತಿ ಪ್ರಶ್ನೆಗೂ ಒಂದೊಂದು ಅಂಕ ನಿಗದಿ ಪಡಿಸಲಾಗಿದೆ . ಪ್ರತಿ ಪ್ರಶ್ನೆಗೆ ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ .**

೧ .ಮುದುಕಿಯ ಕಣ್ಣುಗಳು ರೋಷದಿಂದ ಕೆರಳಲು ಕಾರಣ — —-
ಎ) ರಾಹಿಲನು ಬಾಗಿಲು ಬಡಿದಿದ್ದರಿಂದ ಬಿ)ಸೈನಿಕರು ಶತ್ರುವನ್ನು ಹುಡುಕುತ್ತಾ ಬಂದಿದ್ದರಿಂದ ಸಿ)ರಾಹಿಲನು ತನ್ನ ಶತ್ರುದೇಶಕ್ಕೆ ಸೇರಿದವನೆಂದು ತಿಳಿದು ಡಿ ) ರಾಹಿಲನು ತನ್ನ ಸೊಸೆಯನ್ನು ಉಳಿಸಿ ಮೊಮ್ಮಗುವನ್ನು ಉಳಿಸಲಿಲ್ಲವೆಂದು

೨. ಯುದ್ಧ ಗದ್ಯ ಭಾಗದ ಆಕರ ಕೃತಿ — — —
ಎ) ಕದನ ವಿರಾಮ. ಬಿ) ತಳ ಒಡೆದ ದೋಣಿಯಲಿ ಸಿ) ಸುಳಿಯಲ್ಲಿ ಸಿಕ್ಕವರು ಡಿ) ಚಪ್ಪಲಿಗಳು

೩. ಭೂಮಿಜಾತೆ ಎಂದು ಇವಳನ್ನು ಕರೆಯುತ್ತಾರೆ —-
ಎ) ಶಬರಿ ಬಿ)ಸೀತೆ ಸಿ)ಕೌಸಲ್ಯೆ ಡಿ )ಸುಮಿತ್ರೆ

೪ . ಶಬರಿಯ ವೃತ್ತಾಂತವನ್ನು ರಾಮನಿಗೆ ತಿಳಿಸಿದವನು—-
ಎ)ದನು ಬಿ) ಮತಂಗ ಸಿ) ಲಕ್ಷ್ಮಣ ಡಿ) ಸುಗ್ರೀವ

೫ . ನಾಲ್ವಡಿ ಕೃಷ್ಣರಾಜ ಒಡೆಯರು ಪಟ್ಟಾಭಿಷಿಕ್ತರಾದ ವರ್ಷ
ಎ) ೧೭೯೫ ಬಿ) ೧೮೯೫ ಸಿ) ೧೮೯೪ ಡಿ) ೧೮೮೫

೬.ವಿಶ್ವೇಶ್ವರಯ್ಯನವರ ಆತ್ಮಚರಿತ್ರೆಯ ಹೆಸರು— —-
ಎ) ನೇಷನ್ ಬಿಲ್ಡಿಂಗ್ ಫಾರ್ ಇಂಡಿಯಾ ಬಿ)ರಿಕನ್ ಸ್ಟ್ರಕ್ಟಿಂಗ್ ಇಂಡಿಯಾ ಸಿ) ಮೆಮೋರೀಸ್ ಆಫ್ ಮೈ ವರ್ಕಿಂಗ್ ಲೈಫ್ ಡಿ) ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯಾ

೭ .ನಾವು ಮನುಷ್ಯರು ನಮ್ಮೊಳಗೆ ಮೂರ್ಛಾವಸ್ಥೆಯಲ್ಲಿರುವ ಯಾವುದನ್ನು ಎಚ್ಚರಗೊಳಿಸಬೇಕು ಎಂದು ದೇವನೂರು ಮಹಾದೇವನವರು ಹೇಳಿದ್ದಾರೆ ?
ಎ)ಪ್ರೀತಿಯನ್ನು ಬಿ)ಭಯವನ್ನು ಸಿ) ಧೈರ್ಯವನ್ನು ಡಿ)ಕಾರುಣ್ಯವನ್ನು

೮.ಶಿವಾನುಭವ ಶಬ್ದಕೋಶ ಪುಸ್ತಕವನ್ನು ಬರೆದವರು
ಎ) ಸಿದ್ಧಲಿಂಗಯ್ಯ ಬಿ) ದೇವನೂರು ಮಹಾದೇವ ಸಿ) ಫ. ಗು. ಹಳಕಟ್ಟಿ ಡಿ) ಅಶೋಕ ಪೈ

೯ . ಶಾನುಭೋಗರು ಚಿಕ್ಕನಾಯಕನ ಹಳ್ಳಿಗೆ ಹೋಗಲು ಕಾರಣ — —
ಎ) ರೈತರಿಂದ ಸಂಗ್ರಹಿಸಿದ ಕಂದಾಯದ ಮೊತ್ತವನ್ನು ಖಜಾನೆಗೆ ಸಲ್ಲಿಸಲು ಬಿ)ರೈತರಿಂದ ಕಂದಾಯ ಸಂಗ್ರಹಿಸಲು ಸಿ) ಬೆಳೆದ ಬೆಳೆಯನ್ನು ಮಾರಿ ಬರಲು ಡಿ) ಸ್ನೇಹಿತರನ್ನು ಮಾತನಾಡಿಸಿ ಬರಲು

**೧೦ .ಭಗವದ್ಗೀತೆಯನ್ನು ರಚಿಸಿದವರು ———-**
**ಎ)ವಾಲ್ಮೀಕಿ ಬಿ) ವೇದವ್ಯಾಸರು ಸಿ) ಮನು ಡಿ) ಕೇಶಿರಾಜ**

**೧೧. ದುಷ್ಟಬುದ್ಧಿಯ ಹೇಳಿದ ಯಾವ ಮಾತು ಆಶ್ರುತ ಪೂರ್ವಮ್ ಎಂದು ಧರ್ಮಾಧಿಕರಣರು ಯೋಚಿಸಿದರು ?**
**ಎ) ಧರ್ಮಬುದ್ಧಿಯು ಹೊನ್ನನ್ನು ಕದ್ದನೆಂದು ಬಿ) ಹೊನ್ನನ್ನು ವೃಕ್ಷದ ಬಳಿ ಅಡಗಿಸಿಟ್ಟಿದ್ದರೆಂದು**
**ಸಿ) ವೃಕ್ಷವು ಸಾಕ್ಷಿ ಹೇಳುವುದೆಂದು ಡಿ) ವೃಕ್ಷದ ಬಳಿ ಹೂತಿಟ್ಟಿದ್ದ ಹೊನ್ನು ಕಾಣುತ್ತಿಲ್ಲವೆಂದು**

**೧೨. ದುರ್ಗಸಿಂಹನು ರಚಿಸಿದ ಕೃತಿ ——-**
**ಎ)ಕರ್ಣಾಟ ಭಾರತ ಕಥಾಮಂಜರಿ ಬಿ) ಸಾಹಸಭೀಮ ವಿಜಯ ಸಿ)ಕರ್ಣಾಟಕ ಪಂಚತಂತ್ರಂ**
**ಡಿ) ಜೈಮಿನಿ ಭಾರತ**

**೧೩.ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಹೇಗೆ ನಡೆಸಬೇಕು ?**
**ಎ) ನಿಧಾನವಾಗಿ ಬಿ) ವೇಗವಾಗಿ ಸಿ) ಎಚ್ಚರದಿಂದ ಡಿ) ಸಂತೋಷದಿಂದ**

**೧೪.ನದೀ ಜಲಗಳು ಏನಾಗಿವೆ ಎಂದು ಕವಿ ಜಿ . ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ ?**
**ಎ) .ಬತ್ತಿಹೋಗಿವೆ ಬಿ)ಪರಿಶುದ್ಧವಾಗಿವೆ ಸಿ) ತುಂಬಿ ಹರಿಯುತ್ತಿವೆ ಡಿ)ಕಲುಷಿತವಾಗಿವೆ**

**೧೫ .ಕಾಲದ ಹಕ್ಕಿಯು ಯಾರನ್ನು ಹರಸಿದೆ ?**
**ಎ) ಹೊಸಗಾಲದ ಹಸು ಮಕ್ಕಳನ್ನು ಬಿ) ಮುದುಕರನ್ನು. ಸಿ) ಬಡವರನ್ನು. ಡಿ) ಯುವಕರನ್ನು**

**೧೬ .ಕಾಲದ ಹಕ್ಕಿಯು ಯಾವುದನ್ನು ಒಡೆಯಲು ಹೊಂಚು ಹಾಕಿರಬಹುದೆಂದು ಕವಿ ಬೇಂದ್ರೆಯವರು ಹೇಳಿದ್ದಾರೆ ?**
**ಎ) ಸೂರ್ಯ ಚಂದ್ರರನ್ನು ಬಿ) ಆಕಾಶವನ್ನು ಸಿ)ಪಾತಾಳವನ್ನು. ಡಿ) ಬ್ರಹ್ಮಾಂಡವನ್ನು**

**೧೭ . ಹಲಗಲಿ ಗ್ರಾಮವು ಯಾವ ಜಿಲ್ಲೆಯಲ್ಲಿದೆ ?**
**ಎ) ಬಿಜಾಪುರ ಬಿ)ಬಾಗಲಕೋಟೆ ಸಿ ) ಬಳ್ಳಾರಿ ಡಿ) ಬೀದರ್**

**೧೮. ಲಾವಣಿಕಾರ ಕತ್ತಿ ಹಿಡಿಯುವ ಜನರು ಎಂದು ಯಾರನ್ನು ಕರೆದಿದ್ದಾನೆ ?**
**ಎ) ಹಲಗಲಿ ಬೇಡರು ಬಿ) ಜನಪದರು ಸಿ) ಸಿಪಾಯಿಗಳು ಡಿ)ಕಂಪನಿ ಸರಕಾರದವರು**

**೧೯. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ——-**
**ಎ) ಭೀಮ ಬಿ) ನಕುಲ ಸಹದೇವರು ಸಿ) ಅರ್ಜುನ ಡಿ) ಧರ್ಮರಾಯ**

**೨೦. ಕೃಷ್ಣನು ತನ್ನ ಜನ್ಮ ವೃತ್ತಾಂತವನ್ನು ತಿಳಿಸಿ ಹಸ್ತಿನಾವತಿಯ ರಾಜ್ಯಭಾರದ ಆಮಿಷವೊಡ್ಡಿದಾಗ ಕರ್ಣನು ಇದರಿಂದ ಯಾರಿಗೆ ಕೇಡಾಯಿತೆಂದು ಯೋಚಿಸಿದನು ?**
**ಎ) ಪಾಂಡವರಿಗೆ ಬಿ) ಮಾದ್ರರಿಗೆ ಸಿ) ಯಾದವರಿಗೆ ಡಿ) ಕುರುಪತಿಗೆ**

**೨೧. ಹಸುರಾಗಸ ; ಹಸುರು ಮುಗಿಲು ; ಹಸುರು ಗದ್ದೆಯಾ ಬಯಲು ಪದ್ಯದ ನುಡಿಯ ಮುಂದಿನ ಸಾಲುಗಳು**
**ಎ) ಹಸುರಿನ ಮಲೆ ;ಹಸುರು ಕಣಿವೆ ;ಹಸುರು ಸಂಜೆಯೀ ಬಿಸಿಲೂ ! ಬಿ) ಹಸುರಿನ ಮಲೆ ;ಹಸುರು ಕಣಿವೆ ಹಸುರು ಮಲೆಯೀ ಬಿಸಿಲೂ ಸಿ) ಹಸುರು ಮಲೆ ;ಹಸುರು ಕಣಿವೆ ;ಹಸುರು ಹಸುರಿಳೆಯುಸಿರೂ ! ಡಿ)ಹೊಸಹೂವಿನ ಕಂಪು ಹಸುರು ,ಎಲರಿನ ತಂಪೂ ಹಸುರು**

**೨೨. ಹಸುರು ಯಾವುದರ ಮೈಯನ್ನು ಮುಚ್ಚಿದೆ ಎಂದು ಕವಿ ಹೇಳಿದ್ದಾರೆ ?**
**ಎ) ಆಕಾಶದ ಬಿ) ಭೂಮಿಯ ಸಿ ) ಪರ್ವತದ ಡಿ) ಸಮುದ್ರದ**

**೨೩. ಯಾರನ್ನು ಒಪ್ಪಿಸಿ ಪೂರ್ವಕ್ರಮದಲ್ಲಿದ್ದಂತೆ ನಡೆಯುವ ಹಾಗೆ ಮಾಡುವೆನೆಂದು ಭೀಷ್ಮರು ದುರ್ಯೋಧನನಿಗೆ ಹೇಳಿದ್ದಾರೆ ?**
**ಎ) ಯಾದವರನ್ನು ಬಿ)ನಕುಲ ಸಹದೇವರನ್ನು. ಸಿ)ಭೀಮಾರ್ಜುನರನ್ನು**
**ಡಿ)ಪಾಂಡವರನ್ನು**

**೨೪ . ಯಾವುದಕ್ಕೋಸ್ಕರ ಹೋರಾಡುವುದಾಗಿ ದುರ್ಯೋಧನ ಹೇಳುತ್ತಾನೆ ?**
**ಎ) ಸಂಪತ್ತಿಗಾಗಿ ಬಿ) ಛಲಕ್ಕಾಗಿ ಸಿ) ಭೂಮಿಗಾಗಿ ಡಿ) ಸೇಡಿಗಾಗಿ**

**೨೫. ಶ್ರೀರಾಮನ ಅಶ್ವಮೇಧದ ಕುದುರೆಯು ಯಾರ ತೋಟವನ್ನು ಹಾಳು ಮಾಡಿತು ?**
**ಎ) ವಸಿಷ್ಠ ಮಹರ್ಷಿ. ಬಿ) ವಿಶ್ವಾಮಿತ್ರ ಮಹರ್ಷಿ ಸಿ) ಅಗಸ್ತ್ಯ ಋಷಿ. ಡಿ)ವಾಲ್ಮೀಕಿ ಮಹರ್ಷಿ**

**೨೬ . ಲವನು ಕುದುರೆಯನ್ನು ಕಟ್ಟಿದನೆಂದು ಮುನಿಸುತರು ಭಯಪಡಲು ಕಾರಣ ——**
**ಎ) ಅರಸರಿಂದ ಶಿಕ್ಷೆಗೆ ಒಳಗಾಗಬೇಕಾಗುವುದೆಂದು ಬಿ) ಸೈನಿಕರೊಂದಿಗೆ ಹೋರಾಡಬೇಕಾಗುವುದೆಂದು ಸಿ) ವಾಲ್ಮೀಕಿ ಮಹರ್ಷಿಗಳು ಗದರಿಸುವರೆಂದು ಡಿ) ಕುದುರೆಯು ಕೋಪಗೊಂಡು ದಾಳಿ ಮಾಡಬಹುದೆಂದು**

**೨೭. ಇವರೆಲ್ಲ ಅಹಮಸ್ಮಿ ಎಂಬ ಮಹಾವಾರಿಧಿಯ ತರಂಗಗಳು ಎಂದು ಸ್ವಾಮಿ ವಿವೇಕಾನಂದರು ಯಾರನ್ನು ಕುರಿತು ಹೇಳಿದ್ದಾರೆ ?**
**ಎ) ಕ್ರೈಸ್ತ ,ಬುದ್ಧ ಬಿ) ಕೃಷ್ಣ ಸಿ) . ರಾಮ ಡಿ) ಮೇಲಿನ ಎಲ್ಲರೂ**

**೨೮. ಪುಟ್ಟಪೋರಿಯ ಒಡೆಯನ ಅಂಗಳದಲ್ಲಿ ಮೈ ತುಂಬಿ ನಿಂತಿರುವುದು —-**
**ಎ) ಮಾವಿನ ಮರಗಳು ಬಿ) ತೆಂಗಿನ ಮರ ಸಿ) ಮಲ್ಲಿಗೆ ಗಿಡದಲ್ಲಿ ಅರಳಿ ನಿಂತ ಹೂವುಗಳು**
**ಡಿ) ಹುಣಸೆಯ ಮರಗಳು**

**೨೯.ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಬಲಿಯಾದ ಮುಗ್ಧ ಹಿಂದೂ ,ಸಿಖ್ ,ಮುಸಲ್ಮಾನರ ಸಂಖ್ಯೆ ——**
**ಎ) ಸುಮಾರು ೧೫೦೦ ಬಿ)ಸುಮಾರು ೨೦೦೦ ಸಿ) ಸುಮಾರು ೨೫೦೦ ಡಿ) ಸುಮಾರು ೩೦೦೦**

೩೦. ಕೈಯಿದ್ದು ಕಾಲಿಲ್ಲದ ಶಿರಹರಿದ ಮುಂಡವಾಗಿದ್ದು ಮೈಯಲ್ಲಿ ನವಗಾಯ ಒಂಬತ್ತು ತುಂಡವಾಗಿ ಒಯ್ಯನೊಯ್ಯನೆ ಬಂದು ಹೆಗಲೇರಿಕೊಂಡು ರಾಯರಾಯರಿಗೆಲ್ಲ ತಾನೇ ಪ್ರಚಂಡವಾಗಿರುವುದು
ಎ) ಹೊದಿಕೆ ಬಿ) ಕಿರೀಟ ಸಿ) ಬೆದರುಗೊಂಬೆ ಡಿ) ಅಂಗಿ

೩೧ .ಬೃಹಚ್ಛತ್ರ ಪದದಲ್ಲಿರುವ ಸಂಧಿ — —-
ಎ) ಲೋಪ ಬಿ)ಆಗಮ ಸಿ) ಶ್ಚುತ್ವ ಡಿ) ಆದೇಶ

೩೨ . ಪಂಚಭೂತಗಳು ಪದವು ಈ ಸಮಾಸದ ಉದಾಹರಣೆಯಾಗಿದೆ — —
ಎ) ದ್ವಿಗು ಬಿ) ಅಂಶಿ ಸಿ) ದ್ವಂದ್ವ ಡಿ) ಗಮಕ

೩೩. ಇವುಗಳಲ್ಲಿ ಅನುಕರಣಾವ್ಯಕ್ಕೆ ಉದಾಹರಣೆಯಾದ ಪದ —-
ಎ) ಮೇಲು ಕೀಳು ಬಿ) ಕಟ್ಟಕಡೆಗೆ ಸಿ) ಓಹೋ ಡಿ) ಸುಯ್ಯನೆ

೩೪.ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುವುದು —
ಎ) ಅರ್ಧವಿರಾಮ ಬಿ)ಆವರಣ ಸಿ) ವಿವರಣಾತ್ಮಕ ಡಿ) ಉದ್ಧರಣ

೩೫.ಇವುಗಳಲ್ಲಿ ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಯಾದ ಪದ—-
ಎ) ನೀನು ಬಿ) ಅವನು ಸಿ) ನಾನು ಡಿ) ತಾನು

೩೬. ಹೋಗಿದ್ದರು ಕ್ರಿಯಾಪದದ ಸಂಭಾವನಾರ್ಥಕ ರೂಪ —-
ಎ) ಹೋದಾರು ಬಿ)ಹೋಗಿದ್ದಾರೆ ಸಿ) ಹೋಗರು ಡಿ) ಹೋಗುವರು

೩೭ . ಇವುಗಳಲ್ಲಿ ಕೃದಂತ ಭಾವನಾಮಕ್ಕೆ ಉದಾಹರಣೆಯಾದ ಪದ— —
ಎ) ಅಂಜಿದ ಬಿ)ಅಂಜಿಕೆ ಸಿ) ಅಂಜುತ್ತ ಡಿ)ಅಂಜು

೩೮. ಕಂದಪದ್ಯದಲ್ಲಿರುವ ಪಾದಗಳ ಸಂಖ್ಯೆ — —
ಎ)೪ ಬಿ) ೬ ಸಿ) ೮ ಡಿ) ೧೪

೩೯. ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ . ಈ ವಾಕ್ಯದಲ್ಲಿರುವ ಅಲಂಕಾರ
ಎ) ಉತ್ಪ್ರೇಕ್ಷೆ ಬಿ) ಉಪಮಾ ಸಿ)ದೃಷ್ಟಾಂತ ಡಿ) ರೂಪಕ

೪೦ .ಒಟ್ಟಾಗಿ ಬಾಳುವುದರ ಮಹತ್ವವನ್ನು ಸೂಚಿಸುವ ಗಾದೆ —-
ಎ)ಕೂಡಿ ಬಾಳಿದರೆ ಸ್ವರ್ಗ ಸುಖ ಬಿ)ತಾಳಿದವನು ಬಾಳಿಯಾನು ಸಿ) ಕೈ ಕೆಸರಾದರೆ ಬಾಯಿ ಮೊಸರು ಡಿ) ಆಳಾಗಿ ದುಡಿ ;ಅರಸನಾಗಿ ಉಣ್ಣು